**ಅಪರ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಲಯ, ಚನ್ನಪಟ್ಟಣ**

**ಪ್ರಕರಣ ಸಂಖ್ಯೆಃ ಸಿ.ಸಿ.1031/21**

**ದಿನಾಂಕಃ** 23.06.2023
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ** 2 **(ಚಾ.ಸಾ.**2 **)**

| | | |
|---|---|---|
| **ಹೆಸರು** | ಃ | **ರವಿಕುಮಾರ ಬಿ.ಆರ್** |
| **ತಂದೆಯ ಹೆಸರು** | ಃ | **ರೇವಣ್ಣ** |
| **ವಯಸ್ಸು** | ಃ | 28 **ವರ್ಷ** |
| **ಉದ್ಯೋಗ** | ಃ | **ಪಿಸಿ -** 803, **ಚನ್ನಪಟ್ಟಣ ಪುರ ಠಾಣೆ** |
| **ವಾಸ ಸ್ಥಳ** | ಃ | **ಚನ್ನಪಟ್ಟಣ** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಡಿಸೆಂಬರ್ 2019 ರಿಂದ ಇಲ್ಲಿಯವರೆಗೆ ಚನ್ನಪಟ್ಟಣ ಪುರ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ತಾಃ 19.03.2021 ರಂದು ಪ್ರಾಸಾ.1 ರವರ ಜೊತೆ 3 ಮತ್ತು 4 ನೇ ಬೀಟ್ ರಾತ್ರಿ ಗಸ್ತುಗೆಂದು ನೇಮಿಸಿದ್ದು, ಸುಮಾರು ರಾತ್ರಿ 11 ಗಂಟೆ ಸಮಯದಲ್ಲಿ ಸಿಪಿಟಿ ಗಾರ್ಡನ್ ಕಡೆಯಿಂದ ಬಿಎಂ ರಸ್ತೆಯಲ್ಲಿ ಬರುತ್ತಿದ್ದಾಗ ಒಂದು ಮಹೇಂದ್ರ ಜೀಟೋ ವಾಹನ ಕೆಎ 11 ಬಿ 5964 ರಲ್ಲಿ ಎರಡು ಹಸುಗಳನ್ನು ಹಾಕಿಕೊಂಡು ಬರುತ್ತಿರುತ್ತಾರೆ.

3. ಸದರಿ ವಾಹನವನ್ನು 8 ನೇ ಕ್ರಾಸ್ ಬಳಿ ತಡೆದು ವಿಚಾರಿಸಿದಾಗ 1 ನೇ ಆರೋಪಿ - ಕೃಷ್ಣ ಬಿನ್ ಚಿಕ್ಕಸಿದ್ದೇಗೌಡ ಮತ್ತು ಆದಿಬ್ ಎಂದು ತಿಳಿಸಿದ್ದು, ಸದರಿ ಅವರನ್ನು ವಿಚಾರಿಸಿದಾಗ ಯಾವುದೇ ಗೋ ಪರವಾನಿಗೆ ಹೊಂದಿರಲಿಲ್ಲ. ಸದರಿ ಹಸುಗಳನ್ನು ಕಟಾವು ಮಾಡಲು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸದರಿ ಅವರನ್ನು 11.20 ಕ್ಕೆ ಠಾಣಾ ಎಸ್ ಹೆಚ್ ಓ - ಚಾಸಾ.10 ರವರ ಮುಂದೆ ಹಾಜರುಪಡಿಸಿ, ವರದಿ ನೀಡಿರುತ್ತೇವೆ.

4. ಸಾಕ್ಷಿಯು ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ ಎಂದು ತಿಳಿಸಿದ್ದು, ಆರೋಪಿತರು ಗೈರು ಹಾಜರಿದ್ದು, ಆರೋಪಿತರ ಪರ ವಕೀಲರು ಆರೋಪಿತರನ್ನು ಗುರುತಿಸಲು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

5. ಈ ಹಂತದಲ್ಲಿ ಸಾಕ್ಷಿ 2 ಫೋಟೋಗಳನ್ನು ತೋರಿಸಿದ್ದು, ಸದರಿ ಫೋಟೋಗಳಲ್ಲಿರುವ ವಾಹನ ಕೃತ್ಯ ಬಳಸಿದ ವಾಹನ ಎಂದು ಗುರುತಿಸಿದ್ದು, ಸದರಿ ಫೋಟೋಗಳನ್ನು ಈಗ ಕ್ರಮವಾಗಿ ನಿಪಿ.4 ಮತ್ತು ನಿಪಿ.5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಜಿಎಸ್., ವಕೀಲರಿಂದಃ</u>**

6. ಸದರಿ ದಿನಾಂಕದಂದು ನೀವು ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲಾತಿಯನ್ನು ತನಿಖಾಧಿಕಾರಿಗೆ ಆಗಲೀ ಅಥವಾ ನ್ಯಾಯಾಲಯಕ್ಕೆ ಆಗಲೀ ಹಾಜರುಪಡಿಸಿದ್ದೀರಾ ಅಂದರೆ ಸಾಕ್ಷಿ ಯಾವುದೇ ದಾಖಲೆ ನೀಡಿಲ್ಲ, ಆದರೆ ಸದರಿ ಮಾಹಿತಿ ಡೈರಿಯಲ್ಲಿ ನಮೂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಅಂದರೆ ಇಲ್ಲ.

7. 8ನೇ ಕ್ರಾಸ್ ಎದರುಗಡೆ ವರದರಾಜು ಆಸ್ಪತ್ರೆ ಇದೆ ಅಂದರೆ ಸಾಕ್ಷಿ ನಾವು ಪೊಲೀಸ್ ಚೌಕಿ ಬಳಿ ಆರೋಪಿತರನ್ನು ತಡೆದೆವು. ರಾತ್ರಿ 11 ಗಂಟೆ ಸಮಯದಲ್ಲಿ ಜನರು ಓಡಾಡುತ್ತಿರುತ್ತಾರೆ ಅಂದರೆ ತುಂಬಾ ವಿರಳವಾಗಿರುತ್ತದೆ.

8. ವಾಹನದಲ್ಲಿ ಯಾವ ತಳಿಯ ಮತ್ತು ಬಣ್ಣ ಹಸು ಅಂದರೆ ಸಾಕ್ಷಿ ಒಂದು ಕಂದು ಬಣ್ಣದ ಸೀಮೆ ಹಸು ಮತ್ತು ಇನ್ನೊಂದು ಬೂದಿ ಬಣ್ಣದ ನಾಟಿ ತಳಿ ಹಸುವಾಗಿತ್ತು. ಈ ಬಗ್ಗೆ ನಾನು ಹೇಳಿಕೆ ಹಸು ಯಾವ ಬಣ್ಣದ್ದು ಮತ್ತು ಯಾವ ತಳಿ ಎಂದು ಹೇಳಿಲಿಲ್ಲ. ಹಸುವನ್ನು ಕಟಾವು ಮಾಡಿಲ್ಲೆಂದು ತೆಗೆದುಕೊಂಡು ಹೋಗುತ್ತಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ನಾನು ಆ ರೀತಿ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ.

9. ಆರೋಪಿತರನ್ನು ಠಾಣೆಗೆ ಕರೆದುಕೊಂಡು ಹೋದ ಸಮಯದಲ್ಲಿ, ವಾಹನ, ಹಸುಗಳು ಮತ್ತು ಆರೋಪಿತರು ಹಾಗೂ ನಾವು ಇರುವ ಫೋಟೋಗಳನ್ನು ತೆಗೆಸಿದ್ದೀರಾ ಅಂದರೆ ತೆಗೆಯಲಿಲ್ಲ. ಒಂದು ವೇಳೆ ಆರೋಪಿತರು ಆ ರೀತಿ ಹಸುಗಳನ್ನು ಸಾಗಾಣಿಕೆ ಮಾಡುತ್ತಿದ್ದರೆ, ನೀವು ಫೋಟೋಗಳನ್ನು ತೆಗೆಸಬಹುದಾಗಿತ್ತು, ಆದರೆ ಆರೋಪಿತರು ಯಾವುದೇ ಹಸುಗಳನ್ನು ಅಕ್ರಮ ಸಾಗಾಣಿಕೆ ಮಾಡದೇ ಇದ್ದುದರಿಂದ ನೀವು ಫೋಟೋಗಳನ್ನು ತೆಗೆಸಿಲ್ಲ ಅಂದರೆ ಸರಿಯಲ್ಲ.

10. ಆರೋಪಿತರು ಯಾವುದೇ ಹಸುಗಳನ್ನು ಸಾಗಾಣಿಕೆ ಮಾಡುತ್ತಿರಲಿಲ್ಲ, ನಾನು ಆ ಬಗ್ಗೆ ನನ್ನ ಮೇಲಾಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ಎನ್.ಉಷಾರಾಣಿ )
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,**
**ಚನ್ನಪಟ್ಟಣ.**